ಪೌರಾಣಿಕ ಕಥೆ

# ಶಿಶುಪಾಲ

■ ಟಿ.ಎಂ. ಸುಬ್ಬರಾಯ
ಕಲೆ: ಅಭಿಷೇಕ್ ಹಳೇಮನಿ



ಶಿಶುಪಾಲನನ್ನು ನಾನು ವಧಿಸಲೇಬೇಕಾಗಿತ್ತು. ಅದು ಅನಿವಾರ್ಯವಾಗಿತ್ತು; ಅವಶ್ಯಕವೂ ಆಗಿತ್ತು. ಕೊಟ್ಟ ಮಾತನ್ನು ನಾನು ಉಳಿಸಿಕೊಳ್ಳಲೇಬೇಕಾಗಿತ್ತು. ಆದರೆ, ಶಿಶುಪಾಲನ ವಧೆ ತುಸು ವಿಳಂಬವಾಯಿತು. ಅದಕ್ಕೆ ಕಾರಣವೂ ನಾನು ಕೊಟ್ಟ ಮಾತೇ ಆಗಿತ್ತು. ಬೇರೆ ಬೇರೆ ಯುಗಗಳಲ್ಲಿ ಬೇರೆ ಬೇರೆ ಜನರಿಗೆ ನಾನು ಕೊಟ್ಟ ಮಾತು ಇದುವರೆಗೆ ನನ್ನಲ್ಲಿಯೇ ಗುಟ್ಟಾಗಿ ಉಳಿದಿತ್ತು. ಯಾವತ್ತೂ ನಾನು ಅದನ್ನು ಬಹಿರಂಗಗೊಳಿಸಿರಲಿಲ್ಲ. ಆದರೆ, ಧರ್ಮಜ್ಞ ಯುಧಿಷ್ಠಿರನು ಕೈಗೊಂಡಿದ್ದ ರಾಜಸೂಯಾ ಅಧ್ವರದ ಮುಕ್ತಾಯದ ಹಂತದಲ್ಲಿ ರಾಜ ಮಹಾರಾಜ, ಮಂತ್ರಿ ಮಹೋದಯರಿಂದ, ಪುರ ಪ್ರಮುಖರಿಂದ, ಕುಲ ನಾರೀ ಗಡಣದಿಂದ, ನಾರದಾದಿ ಮಹರ್ಷಿಗಳ ಹಾಗೂ ವೈದಿಕೋತ್ತಮರಿಂದ ತುಂಬಿದ ಸಭೆಯಲ್ಲಿ ಕುರುಕುಲ ಪಿತಾಮಹರಾದ ಭೀಷ್ಮಾಚಾರ್ಯರು ಇವನ್ನು ಬಹಿರಂಗಗೊಳಿಸಿದರು.

ರಾಜಸೂಯಾ ಯಾಗ ಕೈಗೊಳ್ಳುವ ಮೊದಲು ಭೀಮಾರ್ಜುನರು, ನಕುಲ ಸಹದೇವರು ವಿವಿಧ ದೇಶಗಳಿಗೆ ದಿಗ್ವಿಜಯ ಯಾತ್ರೆ ಕೈಗೊಂಡಿದ್ದರು. ರಾಜಾಧಿರಾಜರನ್ನು ಮಣಿಸಿಯೋ, ಒಪ್ಪಿಸಿಯೋ ಅವರಿಂದ ಕಪ್ಪಗಾಣಿಕೆಯನ್ನು ಪಡೆದಿದ್ದರು. ಅಂಥವರಲ್ಲಿ ನಕುಲನು ಕಾರುಶದ ಭೂಪಾಲ ದಂತವಕ್ರನನ್ನೂ, ಛೇದಿಯ ಅರಸ ಶಿಶುಪಾಲನನ್ನು ಭೀಮಸೇನನೂ ಮಣಿಸಿ ಪರಾಜಿತರಾದ ಅವರಿಂದ ಕಪ್ಪಗಾಣಿಕೆ ಪಡೆದು ಬಂದಿದ್ದರು. ಚೇದೀರಾಜಚೈದ್ಯ ಎಂದು ಕರೆಸಿಕೊಂಡವ ಈ ಶಿಶುಪಾಲ. ಈ ಶಿಶುಪಾಲನಿಗೆ ಸುನೀತ ಎನ್ನುವ ಇನ್ನೊಂದು ಹೆಸರೂ ಉಂಟು. ಈ ಶಿಶುಪಾಲನ ತಂದೆ ಧಾಮಘೋಷ; ತಾಯಿ ಶ್ರುತಶ್ರವೆ. ಈಕೆ ನನ್ನ ಸೋದರತ್ತೆ ಕುಂತಿಯ ತಂಗಿ. ನನ್ನ ಚಿಕ್ಕ ಸೋದರತ್ತೆ.

ಧರ್ಮಿಷ್ಠನಾದ ಯುಧಿಷ್ಠಿರ ಕೈಗೊಂಡಿದ್ದ ರಾಜಸೂಯಾ ಯಾಗ ಯಾವುದೇ ಅಡೆತಡೆ ಇಲ್ಲದೆ ಪರಿಸಮಾಪ್ತಿಯ ಹಂತ ತಲುಪಿತು. ಆ ಹಂತದಲ್ಲಿ ಅಗ್ರಪೂಜೆ ಯಾರಿಗೆ ಸಲ್ಲಬೇಕೆಂಬ ವಿಚಾರ ಎದುರಾಯಿತು.

ಆಚಾರ್ಯ ಭೀಷ್ಮರು ಹೇಳಿದರು: ಇನ್ನು ಯಾರಿಗೆ ಸಲ್ಲುತ್ತದೆ ಅಗ್ರಪೂಜೆ. ಜಗನ್ನಿಯಾಮಕನಾದ ಶ್ರೀಕೃಷ್ಣನೇ ಅಗ್ರಪೂಜೆ ಸ್ವೀಕರಿಸಲು ಅರ್ಹನು. ಅವನಲ್ಲದೆ ಬೇರೆ ಯಾರಿಗೂ ಈ ಅಗ್ರಪೂಜೆ ಸಲ್ಲದು.

ಆಗ ಕುಪಿತನಾದ ಶಿಶುಪಾಲ ತಾನು ಕುಳಿತಿದ್ದ ಆಸನದಿಂದ ಧಿಮ್ಮನೆ ಮೇಲೆದ್ದ. ಖಡ್ಗವನ್ನು ಝುಳಪಿಸುತ್ತಾ–

ಈ ಕುರು ಕ್ಷಿತಿಪಾಲರಲಿ ನೀ ನಾಕೆವಾಳನು ಗಡ|
ವಯಪರಿಪಾಕವುಳ್ಳವ ನೀಸು ಕಾಲದಲೋದಿದರಿತವಿದೆ|
ಕಾಕನುರೆ| ಕೊಂಡಾಡಿ ಗೊಲ್ಲರ ಗೋಕುಲುದ ಗೋಪ ಪ್ರಸಂಗ ವ್ಯಾಕರಣ ಪಾಂಡಿತ್ಯ ಮೆರೆದುದು ಭೀಷ್ಮ ನಿನಗೇ...|

ಮುಂದುವರಿದ ಶಿಶುಪಾಲ ಗರ್ಜಿಸಿದ:

ಇದು ಮಹಾ ಮಖದಲ್ಲಿ ಪೂಜ್ಯನೇ|ಯದುಗಳರಸನು ಭಟ್ಟನಿಲ್ಲಿಗೆ ನದಿಯ ಮಗನಿಲ್ಲಿಗೆ|
ಸದಸ್ಯರು ನಾರದಾದಿಗಳು|ಹುರಿದ ಮರುಭೂಮಿಯಲಿ ಮಾನ್ಯನು|
ಖದಿರನಲ್ಲಿಗೆ ಗೂಗೆ ಕೋಗಿಲೆ|ಮುದಿ ನರಿಗಳಲ್ಲಿಗೆ ಸಭಾಸದರೆಂದನಾ ಚೈದ್ಯ|'

ತನ್ನ ತೀಕ್ಷ್ಣ ಮಾತಿನ ಧಾರೆಯನ್ನು ಮುಂದುವರಿಸಿದ ಚೈದ್ಯ:

'ನೀನಲಾ ಧರ್ಮಜ್ಞನಂದು|ಮಾನಿನಿಯರ ವಿವಾಹದಲಿ ನೀ|
ನೇನ ಮಾಡಿದೆ ಬೇಸರಿಸಿ ಬಳಲಿಸಿದೆ ಬಾಲಕಿಯ|
ಏನ ಹೇಳುವೆನೊಂದು ಹಂಸನು|
ಮಾನಸದ ತೀರದಲಿ ಪಕ್ಷಿ ವಿ|
ತಾನದಲಿ ಧರ್ಮಜ್ಞನಾಯ್ತು ಹಂಸ ನೀನೋ|'

ಆಗ ಭೀಮಸೇನ ಧಿಮ್ಮನೆ ಮೇಲೆದ್ದು ಗುಡುಗಿದ:

'ಕಡುಜರೆದ ಕುನ್ನಿಗೆ|ಕುಡಿಸುವೆನು ದಿವ್ಯಾಸ್ತ್ರ ವಿಶಿಖ ವಿಶೇಷದೌಷಧಿಯ|
ತಡೆದು ತನ್ನನು ರಾಜಕಾರ್ಯವ| ಕೆಡಿಸಿದೆಯಲಾ ದಕ್ಷಯಜ್ಞದ|
ಮೃಡನ ಮುರುಕದ ಕಾಬೆನೆನು ತೊಡೆ ಮುಡುಚಿದನು..|'

ಆಗ ಭೀಷ್ಮಾಚಾರ್ಯರು ಭೀಮಸೇನನನ್ನು ತಡೆದು ಅಂದರು:

'ಇವನ ಕೊಲುವನು ಮಿಕ್ಕ ಭೂಪರ|
ನಿವಹವನು ಮನ್ನಿಸುವೆನೆನೆ ನೀ|
ನಿವನ ಕೊಲುವುದಸಾಧ್ಯನೀತನ ನಿಜವನರಿಯೆಯಲಾ|
ಇವ ಹಿರಣ್ಯಾಕ್ಷಕ ಕಣಾ ಮರು|ಭವದೊಳಗೆ ದಶವದನನಿವ ಸಂಭವಿಸಿದನು ಶಿಶುಪಾಲ ಪೆಸರಲಿ ಭೀಮ'

ಶಿಶುಪಾಲನ ಜನ್ಮ ವೃತ್ತಾಂತವನ್ನು ಭೀಮಸೇನನಿಗೂ, ಇಡೀ ಸಭೆಗೂ ವಿವರಿಸಿದರು ಭೀಷ್ಮಾಚಾರ್ಯರು: ಕ್ಷೀರ ಸಾಗರದಲ್ಲಿ ಶೇಷಶಾಯಿಯಾಗಿ ಪವಡಿಸಿದ್ದ ಮಹಾವಿಷ್ಣುವಿನ ದರ್ಶನ ಪಡೆಯಲು ಸನಕ ಸನಂದಾದಿ ಮಹರ್ಷಿಗಳು ವೈಕುಂಠಕ್ಕೆ ಬಂದರು. ವೈಕುಂಠದ ದ್ವಾರಪಾಲಕರಾಗಿದ್ದ ಜಯ ವಿಜಯರು 'ಮಹಾಪ್ರಭು ಮಹಾವಿಷ್ಣು ಈಗ ಯೋಗನಿದ್ರೆಯಲ್ಲಿದ್ದಾರೆ.